ದಿನಾಂಕಃ 16.04.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಎಸ್.ಎಸ್. ವಕೀಲರಿಂದ:**

ನಾನು ವೃತ್ತಿಯಲ್ಲಿ ಕೃಷಿಕ. ನಾವು ನಮ್ಮ ತಂದೆಗೆ 5 ಜನ ಮಕ್ಕಳು, ಅದರಲ್ಲಿ 3 ಗಂಡು 2 ಹೆಣ್ಣುಮಕ್ಕಳು. ಪ್ರಸ್ತುತವಾಗಿ ಸದರಿಯವರು ಬಾರದಹಳ್ಳಿಯಲ್ಲಿ ವಾಸಿಸುತ್ತಿರುತ್ತಾರೆ. ನನ್ನ ತಂದೆಯು ದಿ.29.07.2017 ರಂದು ಮೃತರಾಗಿರುತ್ತಾರೆ. ನನ್ನ ತಂದೆಯ ಮರಣದ ನಂತರ ಒಟ್ಟು ಕುಟುಂಬದ ಆಸ್ತಿಯು ನನ್ನ ತಾಯಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನನ್ನ ತಾಯಿಯ ಹೆಸರಿನಲ್ಲಿ ಒಟ್ಟು ಎಷ್ಟು ಆಸ್ತಿ ಇದೆ ಎಂದು ಹೇಳಲು ಸಾದ್ಯವಿಲ್ಲ. ನನ್ನ ಹೆಸರಿನಲ್ಲಿ ಒಟ್ಟು 3 ಎಕರೆ ಜಮೀನು ಇರುತ್ತದೆ. ನಮ್ಮ ತಂದೆಯು ದಿ.21.07.1999 ರಂದು ನಮ್ಮ ತಂದೆಯು ನಮ್ಮ 3 ಜನ ಸಹೋದರರಿಗೂ ಸ್ವಲ್ಪ ಆಸ್ತಿಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಆದಾಯ ತೆರಿಗೆಯ ಕುರಿತಾಗಿ ನೀಡಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಉಳಿದ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿಯೇ ಇತ್ತು ಎಂದರೆ ಸರಿ. 2010 ನೇ ಸಾಲಿನ ಏಪ್ರಿಲ್ ತಿಂಗಳಿನಲ್ಲಿ ನಾನು ಮತ್ತು ನನ್ನ ಸಹೋದರರು ಜುಬಾನೆ ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಹಿಸ್ಸೆಯಲ್ಲಿ ಸ.ನಂ.74 ರ 1 ಎಕರೆ 18 ಗುಂಟೆಯನ್ನು ನನ್ನ ಸಹೋದರನಾದ ಸತ್ಯನಾರಾಯಣ ಎಂಬುವವರಿಗೆ ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಜುಬಾನೆ ಹಿಸ್ಸೆಯಲ್ಲಿ ನನ್ನ ತಂದೆ ತಾಯಿಯ ಹೆಸರಿಗೆ ಸ.ನಂ.62, 84, 115 ಮತ್ತು 127 ರ ಜಮೀನನ್ನು ಬಿಟ್ಟಿರುತ್ತೇವೆ.

ನಾವು ಒಟ್ಟು ಕುಟುಂಬದಲ್ಲಿ ಇರುವಾಗ ಸ.ನಂ.74 ರ 1 ಎಕರೆ 18 ಗುಂಟೆಯ ಮೇಲೆ ನಾನು ವ್ಯವಸಾಯ ಸಹಕಾರಿ ಬ್ಯಾಂಕ್ ನಿಂದ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ಸಾಲವನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಸ.ನಂ.74 ರ ಜಮೀನನ್ನು ಆಧಾರವಾಗಿ ಇಟ್ಟಿದ್ದರು ಎಂದರೆ ಸರಿ. ಪ್ರಸ್ತುತವಾಗಿಯು ಸದರಿ ಸ.ನಂ. ನ ಆಸ್ತಿಯ ಮೇಲೆ ಸಾಲ ಬಾಕಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಜಮೀನನ್ನು ಖರೀದಿಸುವಾಗ ಅದರ ಮೇಲಿರುವ ಸಾಲವನ್ನು ಖುಲಾಸೆ ಮಾಡಿಸಿಕೊಂಡು ಖರೀದಿಸಬೇಕು ಎಂಬ ನಿಯಮದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರದಿಂದ ನನ್ನ ತಾಯಿಯು ನನ್ನ ಸಹೋದರ ಪೂರ್ಣೇಶ್ ರವರೊಟ್ಟಿಗೆ ವಾಸಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2015 ನೇ ಸಾಲಿನ ವರೆಗೂ ನನ್ನೊಟ್ಟಿಗೆ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ. ಪ್ರಸ್ತುತವಾಗಿ ಪೂರ್ಣೇಶ್ ರವರು ಮನೆಯನ್ನು ನಿರ್ಮಿಸುತ್ತಿರುವ ಕಾರಣ ನನ್ನ ತಾಯಿ ನನ್ನ ಸಹೋದರ ಸತ್ಯನಾರಾಯಣ ರವರ ಜೊತೆ ವಾಸಿಸುತಿರುತ್ತಾರೆ. ನಾನು ಸ.ನಂ.74 ರ 18 ಗುಂಟೆ ಜಮೀನನ್ನು ನನ್ನ ತಾಯಿಯಿಂದ ದಾನ ಪಡೆದುಕೊಂಡಿರುತ್ತೇನೆ ಎಂದರೆ ಸರಿ.

ಸಾಮಾನ್ಯವಾಗಿ ಒಂದು ಜಮೀನಿನ ಭಾಗವನ್ನು ಖರೀದಿಸುವಾಗ ಅದರ ಸಂಬಂಧ 11E-sketch ಪಡೆಯಬೇಕು ಎಂದರೆ ಸಾಕ್ಷಿಯು ಸ.ನಂ.74 ರ ಸಂಬಂಧ ಸದರಿ ಸ್ಕೆಚ್ ಆಗಿರುತ್ತದೆ.

ಸದರಿ ಸ್ಕೆಚ್ ನ್ನು ನೀಡುವ ಪೂರ್ವದಲ್ಲಿ ಆಜು ಬಾಜುದಾರರಿಗೆ ನೋಟೀಸನ್ನು ನೀಡುವ ಬಾಬ್ತು ನನಗೆ ತಿಳಿದಿರುವುದಿಲ್ಲ. ನಾನು ಕಂದಾಯ ಅಧಿಕಾರಿಗಳೊಟ್ಟಿಗೆ ಶಾಮೀಲಾಗಿ 11E-sketch ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನನ್ನ ತಾಯಿಯೊಟ್ಟಿಗೆ ಒಳ್ಳೆಯ ಬಾಂದವ್ಯ ಇರುತ್ತದೆ ಅವರು ಆರೋಗ್ಯವಾಗಿಯೂ ಇರುತ್ತಾರೆ. ನನ್ನ ತಾಯಿಗೆ ಕೆಲವು ವರ್ಷಗಳಿಂದ ಆರೋಗ್ಯ ಸರಿ ಇರುವುದಿಲ್ಲ, ಕಿವಿ ಕೇಳುವುದಿಲ್ಲ ಮತ್ತು ಕಣ್ಣುಗಳು ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ನಾನೇ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಅದರ ಬಾಬ್ತು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ತಾಯಿಯ ಬಳಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ತಾಯಿಗೆ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ಕೊಡಿಸದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಸ್ವಲ್ಪ ಮಟ್ಟಿಗೆ ಕಿವಿ ಕೇಳಿಸುವುದಿಲ್ಲ.

ದಿ.29.12.2022 ರಂದು ದಾನ ಪತ್ರವನ್ನು ಮಾಡಿಕೊಡಲಾಗಿರುತ್ತದೆ. ಸದರಿ ಪತ್ರವನ್ನು ಸ.3.30 ರಿಂದ 4.00 ರ ಸಮಯದಲ್ಲಿ ಬರೆಯಲಾಗಿರುತ್ತದೆ. ದಾನ ಪತ್ರವನ್ನು ಬರೆದುಕೊಡುವ ಸಮಯದಲ್ಲಿ ನನ್ನ ತಾಯಿಯು ಪೂರ್ಣೇಶ್ ರವರೊಟ್ಟಿಗೆ ಇದ್ದರು. ನನ್ನ ತಾಯಿಯ ಕಿವಿ ವಿಚಾರವಾಗಿ ಚಿಕಿತ್ಸೆಯನ್ನು ನೀಡುವ ಕುರಿತು ಮೂಡಿಗೆರೆಗೆ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿರುವ ಸಾಲದ ಬಾಬ್ತು ಸಹಿಯನ್ನು ಪಡೆಯುತ್ತಿರುತ್ತೇನೆ ಎಂದದು ತಿಳಿಸಿ ನೊಂದಾವಣಿ ಅಧಿಕಾರಿಯವರ ಕಛೇರಿಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಕಿವಿ ಕೇಳದೇ ಇದ್ದ ಕಾರಣ ಮತ್ತು ಕಣ್ಣು ಕಾಣಿಸದೇ ಇದ್ದ ಕಾರಣ ಸುಳ್ಳು ಹೇಳಿ ದಾನ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ದಾನ ಪತ್ರವನ್ನು ಬರೆಸಿಕೊಳ್ಳುವ ವಿಷಯ ಅವರಿಗೆ ತಿಳಿದಿದ್ದರೆ ಸದರಿಯವರು ಸಹಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿಯೇ ಬಂದು ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾನ ಪತ್ರವನ್ನು ಯಾರು, ಎಲ್ಲಿ ಬರವಣಿಗೆ ಮಾಡಿರುತ್ತಾರೆ ಎಂದು ನೆನಪಾಗುತ್ತಿಲ್ಲ. ನೊಂದಾವಣಿ ಅಧಿಕಾರಿಗಳು ಕಛೇರಿಗೆ ನನ್ನ ತಾಯಿಯನ್ನು ನಾನೇ ಕರೆದುಕೊಂಡು ಹೋಗಿರುತ್ತೇನೆ.

ನೊಂದಾವಣಿ ಅಧಿಕಾರಿಗಳು ಕಛೇರಿಗೆ ನಾನು, ನನ್ನ ತಾಯಿ ಮತ್ತು ನನ್ನ ಮಗ ಹೋಗಿರುತ್ತೇವೆ. ಈ ವಿಷಯ ನನ್ನ ಸಹೋದರರಿಗೆ ತಿಳಿಸಿದ್ದ ಬಗ್ಗೆ ನನಗೆ ಯಾವುದೇ ಮಾಹಿತಿ ಇರು ವುದಿಲ್ಲ. ನನ್ನ ತಾಯಿ ಒತ್ತಡವನ್ನು ನೀಡಿದ ಮೇರೆಗೆ ನಾನು ಹೋಗಿರುತ್ತೇನೆ. ನನ್ನ ತಾಯಿಯನ್ನು ಆ ದಿನ ನೇರವಾಗಿ ತಾಲ್ಲೂಕು ಕಛೇರಿಗೆ ಕರೆದುಕೊಂಡು ಹೋಗಿರುತ್ತೇನೆ. ಆ ದಿನ ನಮ್ಮೊಟ್ಟಿಗೆ ರುಕ್ಮಿಣಿ ಎಂಬುವವರು ನಮ್ಮೊಟ್ಟಿಗೆ ಇದ್ದರು. ಸದರಿ ವ್ಯಕ್ತಿಯು ನನ್ನ ಸಂಬಂಧಿಕರಾಗಿರುತ್ತಾರೆ. ದಿಲೀಪ್ ಎಂಬುವವರು ನನ್ನ ಹೆಂಡತಿಯ ಸಹೋದರ ಎಂದರೆ ಸರಿ. ರುಕ್ಮಿಣಿ ಎಂಬುವವರ ಮಗಳನ್ನು ದಿಲೀಪ್ ಎಂಬುವವರಿಗೆ ಮದುವೆ ಮಾಡಿಕೊಡಲಾಗಿರುತ್ತದೆ ಎಂದರೆ ಸರಿ. ದಾನ ಪತ್ರಕ್ಕೆ ಸಹಿ ಮಾಡಿರುವ ಇನ್ನೊಬ್ಬ ಸಾಕ್ಷಿಯು ರುಕ್ಮಿಣಿಯವರ ಸಹೋದರಿ ಎಂದರೆ ಸರಿ. ಸದರಿಯವರು ನಮ್ಮ ಸಂಬಂಧಿಕರು ಎಂದರೆ ಸರಿ. ನನ್ನ ತಾಯಿಯು ಉಪ-ವಿಭಾಗಾಧಿಕಾರಿಯವರು ಕಛೇರಿಯಲ್ಲಿ

ಸದರಿಯವರು ಪೋಷಣೆಯ ಕುರಿತು ಮತ್ತು ಮೋಸದಿಂದ ದಾನ ಪತ್ರವನ್ನು ಬರೆಸಿಕೊಂಡಿರುವ ಕುರಿತು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿಯವರು ಕಛೇರಿಯಲ್ಲಿ ಅವರ ವ್ಯಾಪ್ತಿಗೆ ಈ ವಿಷಯದ ಸಂಬಂಧ ಅಧಿಕಾರ ಇರುವುದಿಲ್ಲ ಎಂದು ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿಗೆ ಒಟ್ಟು ಕುಟುಂಬದ ಆಸ್ತಿಯು ಬಂದಿರುವ ಕಾರಣ ಅವರಿಗೆ ದಾನ ಪತ್ರವನ್ನು ಬರೆದುಕೊಡುವ ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ದಾನ ಪತ್ರವನ್ನು ಬರೆಸಿಕೊಂಡಿರುವ ಜಮೀನು ಜುಬಾನೆ ಹಿಸ್ಸೆಯ ಮುಖಾಂತರ ನನ್ನ ಸಹೋದರ ಸತ್ಯನಾರಾಯಣ ಎಂಬುವವರ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ವಿಷಯವನ್ನು ತಿಳಿಸದೇ ಮೋಸದಿಂದ ನನ್ನ ಹೆಸರಿಗೆ ದಾನ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಾನು ಮೋಸದಿಂದ ದಾನ ಪತ್ರವನ್ನು ಬರೆಸಿಕೊಂಡಿರುವ ವಿಷಯ ತಿಳಿದ ನಂತರದಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ದಾನ ಪತ್ರ ವಜಾಗೊಂಡ ನಂತರ ಪುನಃ ನನ್ನ ತಾಯಿಯ ಹೆಸರಿಗೆ ಹೋಗಬೇಕು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ನನ್ನ ತಂದೆ ನನಗೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದರ ಸಂಬಂಧ ದಾಖಲಾತಿಯನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ 1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.